# ಡಾನ್ಸ್ – ವೃತ್ತಿ ಹೋರಾಟದ ಹಾದಿ

## ಪವನ್
## ಝೀ ಕನ್ನಡದ ಡ್ಯಾನ್ಸ್ ಕರ್ನಾಟಕ ಡಾನ್ಸ್ ಕೊರಿಯೊಗ್ರಾಫರ್

◆ **ಡಾನ್ಸ್ ಬಿಟ್ಟು ಏನು ಮಾಡ್ತಿದ್ದಿರಿ?**

ಕೊರಿಯೊಗ್ರಫಿ– ಡಾನ್ಸ್ ಬಿಟ್ಟು ಬೇರೆ ಇನ್ನೇನೂ ಗೊತ್ತಿಲ್ಲ. ಅದೇ ನನ್ನ ಜೀವನದ ಭಾಗ. ಒಂದು ರೀತಿಯಲ್ಲಿ ದೈಹಿಕವಾಗಿ ಒಂದು ಅಂಗದಂತೆ ಆಗಿದೆ. ಡಾನ್ಸ್ ಕ್ಷೇತ್ರಕ್ಕೆ ಬರಬೇಕು ಎನ್ನುವ ಬಯಕೆ ಕೂಡ ಇರಲಿಲ್ಲ. ಕಾಲೇಜು ದಿನಗಳಲ್ಲಿ ಒಂದು ಪರ್ಫಾರ್ಮೆನ್ಸ್ ಮಾಡಲು ಹೋಗಿ ಅದರ ಮೋಹಿಯಾದೆ. ಅದು ಹೇಗಾಯಿತು ಎಂದರೆ, 2ನೇ ವರ್ಷದ ಡಿಪ್ಲೊಮಾ ಓದುತ್ತಿದ್ದೆ. ನನ್ನ ಗೆಳೆಯ ಕಾಲೇಜ್‌ಡೇಗೆ ಡಾನ್ಸ್ ಮಾಡಬೇಕು ಅಂದ. ಅವನ ಜೊತೆ ನಾನು ಸೇರಿಕೊಂಡೆ. ನಂತರ 'ಚೆನ್ನಾಗಿ ಮಾಡ್ತೀಯಾ, ನೀನು ಮುಂದುವರಿಸು' ಎಂದು ಗೆಳೆಯರು ಹುರಿದುಂಬಿಸಿದರು. ಆಗಲೇ ನಾನು ಕಾಲೇಜ್ ಬಿಟ್ಟು ಡಾನ್ಸ್ ಕಲಿಯಲು ನಿರ್ಧರಿಸಿದೆ. ಅಲ್ಲಿಯ ತನಕ ಒಂದು ಸ್ಟೆಪ್ ಕೂಡ ಗೊತ್ತಿರಲಿಲ್ಲ. ಡಾನ್ಸ್ ತರಗತಿಗೆ ಹೋಗಲು ಆರಂಭಿಸಿದೆ. ಅದರ ಜೊತೆ ಆರ್ಕೆಸ್ಟ್ರಾ, ರೋಡ್ ಶೋಗಳಲ್ಲಿ ಡಾನ್ಸ್ ಮಾಡ್ತಿದ್ದೆ.

ಆರ್ಕೆಸ್ಟ್ರಾ ಹೋದರೆ ಮನೆಗೆ ಬರುವುದು ರಾತ್ರಿ ತಡ ಆಗುತ್ತಿತ್ತು. ಸಂಬಂಧಿಕರೂ ಡಾನ್ಸ್ ಜೀವನ ಏನು ಎಂದು ವ್ಯಂಗ್ಯವಾಡುತ್ತಿದ್ದರು. ಇದೆಲ್ಲ ನಮ್ಮ ತಂದೆಗೂ ಬೇಸರ ಅನ್ನಿಸಿತು. ನಾನು ಮನೆ ಬಿಟ್ಟು ಹೊರ ಬಂದೆ. ಸುಮಾರು ನಾಲ್ಕು ವರ್ಷ ಮನೆಯಲ್ಲಿ ಇರಲಿಲ್ಲ. ಸಣ್ಣ ಪುಟ್ಟ ಪ್ರದರ್ಶನಗಳನ್ನು ನಿರಂತರ ಮಾಡುತ್ತಿದ್ದೆ. ಅದರಿಂದ ಖರ್ಚಿಗೆ ಹಣ ಸಿಗ್ತಾ ಇತ್ತು. ಡಾನ್ಸ್ ಕ್ಲಾಸಿನಲ್ಲಿಯೇ ವಸತಿ ಮಾಡಿಕೊಳ್ಳುತ್ತಿದ್ದೆ. ನಂತರ ನನ್ನದೇ ಒಂದು ತಂಡವನ್ನು ಕಟ್ಟಿಕೊಂಡೆ. ಮೂಡಲಪಾಳ್ಯದ ಬಳಿ ಪುಟ್ಟ ಡಾನ್ಸ್‌ಶಾಲೆಯನ್ನು ಆರಂಭಿಸಿದೆ. ಝೀ ಕನ್ನಡ 2004 ಸುಮಾರಿಗೆ 'ಡಾನ್ಸಿಂಗ್ ಸ್ಟಾರ್'ನಲ್ಲಿ ಕೊರಿಯೊಗ್ರಾಫರ್ ಆಗಿ ಅವಕಾಶ ಸಿಕ್ಕಿತು. ಆಗ ನಾನು ಪುರಸ್ಕಾರಪಡೆದೆ. ಅದಾದ ಮೇಲೆ ನಾನು ನಮ್ಮ ಮನೆಗೆ ಸೇರಿದೆ. ಸಿನಿಮಾಗಳಲ್ಲಿಯೂ ಹಿನ್ನೆಲೆ ನೃತ್ಯವನ್ನೂ ಮಾಡುತ್ತಿದ್ದೆ.

◆ **ಡಾನ್ಸ್ ಮಾಸ್ಟರ್ ಸವಾಲುಗಳು ಹೇಗಿರುತ್ತವೆ?**

ಡಾನ್ಸ್ ಅಂದರೆ ಯಾರ ಮನೆಯಲ್ಲಿಯೂ ಬೆಂಬಲಿಸುವುದಿಲ್ಲ. ಶಾಲೆ–ಕಾಲೇಜು ದಿನಗಳಲ್ಲಿ ಸಂತೋಷಕ್ಕೆ ಡಾನ್ಸ್ ಮಾಡಿದರೆ ಅಷ್ಟಕ್ಕೆ ಮಾತ್ರ ಪ್ರೋತ್ಸಾಹಿಸುತ್ತಾರೆ. ಅದೇ ವೃತ್ತಿಯಾಗಿ ತೆಗೆದುಕೊಳ್ಳುತ್ತೇನೆ ಅಂದರೆ ಎಲ್ಲರ ಮನೆಯಲ್ಲೂ ವಿರೋಧ. ಇದನ್ನು ವೃತ್ತಿಯಾಗಿ ತೆಗೆದುಕೊಳ್ಳಬೇಕು ಎನ್ನುವ ಸವಾಲು ಹೋರಾಟದ ಹಾದಿ.

ವೃತ್ತಿಯಲ್ಲಿ ಒಂದು ಸಿನಿಮಾ ಡಾನ್ಸ್‌ಅನ್ನು ಅದೇ ರೀತಿ ನಾವು ಕಲಿಸುವುದಿಲ್ಲ. ಯಾವುದೇ ಹಾಡನ್ನು ತೆಗದುಕೊಂಡರೂ ಹತ್ತಿಪ್ಪತ್ತು ಬಾರಿ ಅದನ್ನು ಪುನಃ ಪುನಃ ಕೇಳುತ್ತೇವೆ. ಅರ್ಥವನ್ನು ಸೂಕ್ಷ್ಮವಾಗಿ ಗ್ರಹಿಸುತ್ತೇವೆ. ಅರ್ಥಕ್ಕೊಂದು ದೃಶ್ಯವನ್ನು ಕಲ್ಪಿಸಿಕೊಳ್ಳುತ್ತೇವೆ. ಅದಕ್ಕೆ ಕೊರಿಯೊಗ್ರಫಿ ಮಾಡಲು ಆರಂಭಿಸುತ್ತೇವೆ. ಅರ್ಥವನ್ನೇ ಪ್ರಧಾನವಾಗಿ ಇಟ್ಟುಕೊಂಡು ಅದರ ಭಾವವನ್ನು ಕ್ರಿಯೆಯಲ್ಲಿ ಪ್ರಕಟಿಸುತ್ತೇವೆ. ನಮ್ಮ ಕೆಲಸದಲ್ಲಿ ಅಪಾಯದ ಸಂದರ್ಭಗಳೂ ಇವೆ. ಕಾಲ ಬದಲಾದಂತೆ ಡಾನ್ಸ್ ಕೂಡ ಬದಲಾಗುತ್ತದೆ. ನಿರಂತರವಾಗಿ ಅಪ್‌ಡೇಟ್ ಆಗಬೇಕು.




ಕೆಲವೊಂದು ಸನ್ನಿವೇಶ ಭಯಾನಕವಾಗಿ ಇರುತ್ತದೆ. ಆಗ ನಮಗೂ ಭಯ ಇದ್ದೇ ಇರುತ್ತದೆ. ಸಾಧ್ಯ ಎನ್ನುವ ವಿಶ್ವಾಸ ಬಂದ ನಂತರವೇ ಮಾಡಿಸುತ್ತೇವೆ. ಅದಕ್ಕೆ ಬೇಕಾಗುವ ಮುಂಜಾಗ್ರತೆಯನ್ನು ತೆಗೆದುಕೊಳ್ಳುತ್ತೇವೆ. ಇಲ್ಲಿ ಸೆಟ್ಲ್ ಆಗುತ್ತೇನೆ ಎನ್ನುವುದು ದೂರದ ಮಾತು. ಆರ್ಥಿಕವಾಗಿ ತುಂಬ ಕಷ್ಟ. ಪ್ರತಿಭೆ ಇರುವ ತನಕ ಬದುಕು. ಎಂಟು– ಒಂಬತ್ತು ವರ್ಷ ತಿಂಗಳಿಗೆ ಐದಾರು ಸಾವಿರ ಗಳಿಸುವುದೇ ಕಷ್ಟ ಇತ್ತು. ಟೀವಿ ಇಲ್ಲದೆ ಹೋಗಿದ್ದರೆ ತುಂಬ ಕಷ್ಟ ಇರ್ತಾ ಇತ್ತು. ನಾವು ಏನೆಂದು ಗುರುತಿಸಲು ಸಾಧ್ಯ ಆಗುತ್ತಿರಲಿಲ್ಲ. ಮನೆಯಲ್ಲಿ ಅದೇ ಸಮಸ್ಯೆ ಇರುತ್ತಿತ್ತು.

◆ **ಅತ್ಯಂತ ಖುಷಿ ಕೊಟ್ಟ ಸಂದರ್ಭ ಹೇಳಿ**

ಏಳೆಂಟು ವರ್ಷಗಳ ಹಿಂದೆ 'ಡಾನ್ಸಿಂಗ್ ಸ್ಟಾರ್' ಕೊರಿಯೊಗ್ರಫಿ ಮೊದಲಬಾರಿ ಮಾಡ್ತಿದ್ದೆ. ಒಮ್ಮೆ ಬೇಸರವಾಗಿ ಹೆಬ್ಬಾಳದ ಸ್ಯಾಂಡಲ್ ವುಡ್ ಸ್ಟುಡಿಯೋದಿಂದ ನಾಗರಭಾವಿ ತನಕ ಒಬ್ಬನೇ ರಾತ್ರಿ ನಡೆದುಕೊಂಡು ಬಂದಿದ್ದೆ. ಅದರ ಮರುದಿನವೇ ಕೊರಿಯೊಗ್ರಫರ್‌ಗಳ ವಿಶೇಷ ನೃತ್ಯ ಪ್ರದರ್ಶನ ಇದೆ ಅಂತ ಫೋನ್ ಬಂತು. ಒಂದು ಹಾಡಿಗೆ ತಯಾರಿಮಾಡಿಕೊಂಡು ಪ್ರದರ್ಶನ ನೀಡಿದೆ. ರವಿಚಂದ್ರನ್ ತೀರ್ಪುಗಾರರಾಗಿದ್ದರು. ಅವರು ಎದ್ದು ನಿಂತು ಚಪ್ಪಾಳೆ ತಟ್ಟಿ ಅಭಿನಂದಿಸಿದರು. ಇದನ್ನು ಮರೆಯಲು ಸಾಧ್ಯ ಇಲ್ಲ. ಅದರ ಹಿಂದಿನ ಪ್ರದರ್ಶನದಲ್ಲಿ ಚೆನ್ನಾಗಿ ಮಾಡಿಸಿಲ್ಲ ಎಂದು ಟೀಕಿಸಿದ್ದರು. ಇದರ ನಂತರ ಹಲವಾರು ಸನ್ನಿವೇಶಗಳು ಬಂದಿವೆ. ಮೊದಲ ದಿನದ ಪ್ರೋತ್ಸಾಹ ಮರೆಯಲು ಆಗಲಿಲ್ಲ. ಆ ಪ್ರದರ್ಶನದಲ್ಲಿ ಗೆಲುವು ನನ್ನದಾಯಿತು.

◆ **ಕೊರಿಯೊಗ್ರಫರ್ ಆಗಿ ತೆರೆಯ ಹಿಂದೆ ಉಳಿದೆ ಎಂದು ಅನಿಸಿದೆಯಾ?**

ಸ್ಕ್ರೀನ್ ಮುಂದೆ ಬರಬೇಕು ಎನ್ನುವ ಆಸೆ ಇಲ್ಲ. ಒಳ್ಳೆಯ ಕೆಲಸ ಮಾಡಬೇಕು. ನಮ್ಮ ಕೆಲಸ ಚೆನ್ನಾಗಿದ್ದರೆ ಗುರುತಿಸುತ್ತಾರೆ. ಕೋರಿಯೊಗ್ರಾಫರ್ ಆಗಿ 12 ರಿಯಾಲಿಟಿ ಶೋ ಮಾಡಿದ್ದೇನೆ. ಬಹುತೇಕ ಕೊರಿಯೊಗ್ರಾಫರ್ ಒಂದೆರಡು ಶೋಗಳಿಗೆ ಸೀಮಿತವಾಗುತ್ತಾರೆ. ಇಷ್ಟು ದೀರ್ಘ ಕಾಲ ಉಳಿದಿದ್ದೇನೆ ಅಂದರೆ ಅದು ನನ್ನ ಕೆಲಸದ ಮೇಲೆ. ಆಗಾಗ ಡಾನ್ಸ್ ಅಪ್‌ಡೇಟ್ ಆಗುತ್ತಿರುತ್ತದೆ. ಅದನ್ನು ನಾವೂ ಕಲಿಯಬೇಕು. ಕಲಿಕೆಗೆ ಅಂತ್ಯ ಇಲ್ಲ. ತುಂಬ ಜನ ಬರ್ತಾರೆ. ಹೊಸಬರು ಏನೇನೋ ಕಲಿತಿರುತ್ತಾರೆ. ಅವರನ್ನೂ ಮೀರಿಸುವಂತೆ ನಾವೂ ಇರಬೇಕು. ಯಾರೇ ಹೊಸದನ್ನು ಕಲಿಸಿದರೆ ಕಲಿಯುತ್ತೇನೆ. ಪ್ರತಿವಾರ ಹೊಸದನ್ನು ಮಾಡಲೇಬೇಕು. ಇಲ್ಲದಿದ್ದರೆ ಉಳಿಯಲು ಸಾಧ್ಯ ಇಲ್ಲ.

■ **ರಾಘವೇಂದ್ರ ಕೆ.**